**Code No. 08 X(D)**

**ವಾಣಿಜ್ಯ ಪರೀಕ್ಷೆಗಳು**

# ಕನ್ನಡ ಬೆರಳಚ್ಚು – ಪ್ರೌಢ ದರ್ಜೆ – ಪ್ರಥಮ ಪತ್ರಿಕೆ

ಜನವರಿ / ಫೆಬ್ರವರಿ, 2020

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.
2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.
3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ಭಾರತೀಯ ಸಾಹಿತ್ಯ ಸಂಸ್ಕೃತಿಯ ಇತಿಹಾಸದಲ್ಲಿ ಕರ್ನಾಟಕವು ಹನ್ನೆರಡನೇ ಶತಮಾನದಲ್ಲಿ ಮಹತ್ವದ ಸ್ಥಾನ ಪಡೆದಿದೆ. ಕನ್ನಡ ಸಾಹಿತ್ಯದ ಚಳುವಳಿಯ ದೃಷ್ಟಿಯಿಂದ ಗಮನಾರ್ಹವಾದ ಕಾಲಘಟ್ಟ. ಈ ಅವಧಿಯಲ್ಲಿ ವಚನಕಾರರು ಪರಂಪರೆಯಿಂದ ನೆಲೆಗೊಂಡಿದ್ದರು. ರಾಜಕೀಯ, ಸಾಮಾಜಿಕ, ಸಾಹಿತ್ಯ, ಧಾರ್ಮಿಕ ಚೌಕಟ್ಟು ಮೀರಿ ಬೆಳೆದಿದ್ದರು. ಜನ ಸಾಮಾನ್ಯರಲ್ಲಿ ವೈಚಾರಿಕ ಚಿಂತನೆಗಳನ್ನು ಮೂಡಿಸಿದ ಕಾಲ ಇದಾಗಿದೆ. ಹಿಂದಿನ ಸಾಹಿತ್ಯ ಜಟ್ಟು ಕಟ್ಟಳೆಗಳನ್ನು, ಸಾಂಸ್ಕೃತಿಕ ಭಿನ್ನತೆಗಳನ್ನು ಚಳುವಳಿಯ ಸ್ವರೂಪಗಳಲ್ಲಿ ಬದಲಾಯಿಸಿದರು. ಇದರ ಪ್ರೇರಕವಾದ ಸಚುಷ್ಟಿ ಶಕ್ತಿಗಳಾಗಿ ವಚನಕಾರರು ಇಲ್ಲಿ ಕಂಡುಬರುತ್ತಾರೆ. ವೈಧಿಕ ಧರ್ಮದ ಧಾರ್ಮಿಕ ಆಚರಣೆಗಳು, ರಾಜಕೀಯ ವಲಯದಲ್ಲಿನ ದರ್ಪ ನಿಬಂದನೆ, ಮುರುಟಿ ಹೋಗಿದ್ದವು ಸ್ತ್ರೀ ಸ್ವಾತಂತ್ರಗಳು. ಜನ ಸಾಮಾನ್ಯರಲ್ಲಿ ಬದುಕನ್ನು ಕನಿಷ್ಠ ಮಟ್ಟಕ್ಕೆ ಕೊಂಡೊಯ್ಯುವ ಜಾತಿ ತಾರತಮ್ಯ, ಅಸಮಾನತೆಗಳು, ಮೇಲ್ವರ್ಗದ ಭೌತಿಕ ತಂತ್ರಗಾರಿಕೆ ಮುನ್ನಡೆದಿದ್ದವು. ಇದಕ್ಕೆ ಪ್ರತಿಸ್ಪಂದಿಸಿದ ಬಸವಾದಿ ಪ್ರಮುಖರು ತಮ್ಮ ವ್ಯಕ್ತಿತ, ಸಾಹಿತ್ಯ, ಸಾಮಾಜಿಕ ಅರಿವಿನಿಂದಾಗಿ ಸಮಾಜದಲ್ಲಿ ಕ್ರಾಂತಿಕಾರಿಕ ಬದಲಾವಣೆಯನ್ನು ತಂದರು. ಇದು ಪ್ರಗತಿಪರ ಸಮಾಜ ನಿರ್ಮಾಣದ ಹಿನ್ನಲೆಯಲ್ಲಿ ನಿಷ್ಟೆ ಬದ್ಧತೆಗಳನ್ನು ಒಳಗೊಂಡ ಸಮೂಹವು. ಹನ್ನೆರಡನೇ ಶತಮಾನದ ವೇಳೆಗೆ ಬಸವ ಕ್ರಾಂತಿಯಾಯಿತು. ಇದು ಸಾತ್ವಿಕತೆಗೆ ಹೊಸ ರೂಪುರೇಶೆಗಳನ್ನು ಸಜ್ಜುಗೊಳಿಸಿತು.

ವಚನಕಾರರು ಸಮಾಜ ನಿಷ್ಟ ಚಿಂತಕರಾಗಿದ್ದರು. ತಮ್ಮ ನಡೆನುಡಿಗಳ ಮೂಲಕವೇ ಯಾವುದೇ ವಿಷಯಗಳಲ್ಲಿ ತಮ್ಮ ಅನುಭವದ ನುಡಿಗಳನ್ನು ಹೇಳಿದ್ದಾರೆ. ಇವರಿಗೆ

ಆಧ್ಯಾತ್ಮವು ಲೌಕಿಕ ಹಿತದ ಮೂಲಕವೆ ಹೊರ ಹೊಮ್ಮಿತು. ಇಲ್ಲಿ ವಿಶೇಷವೇ ಸರಿ. ವಚನಕಾರರು ತಮ್ಮ ಚಿಂತನೆಗಳ ಫಲವಾಗಿ ವಚನಗಳನ್ನು ರೂಪಿಸಿದರು. ಇದು ಕನ್ನಡ ಸಾಹಿತ್ಯವು ವಿಶ್ವ ಸಾಹಿತ್ಯದ ಮಟ್ಟಕ್ಕೆ ನಿಲ್ಲುವ ಮಹತ್ವವನ್ನು ಕಂಡುಕೊಂಡಿತು. ಈ ಮೂಲಕ ಕನ್ನಡ ಭಾಷೆಗೆ ವೈಚಾರಿಕತೆಯ ಸ್ವರೂಪವನ್ನು ನೀಡಿದರು. ವಚನಕಾರರು ಸಾಹಿತ್ಯದ ಭಾಷೆ, ಆಚಾರ, ಸಂಸ್ಕೃತಿಗಳಲ್ಲಿ ಆಮೂಲಾಗ್ರವಾದ ಬದಲಾವಣೆಗಳನ್ನು ವಚನಕಾರರು ತಂದರು. ವಚನಕಾರರು ಅನುಭವಿಗಳಾಗಿದ್ದು ಚಿಂತಕರು, ಜೀವನ ಪ್ರೀತಿ ಉಳ್ಳವರಾಗಿದ್ದರು.

ವೈದಿಕತೆಯ ಮೂಲಕ ಜಾತಿ, ಮತ, ಭೇದಗಳ ಸ್ವರೂಪವನ್ನು ಹಾಗು ವೇದಗಳ ಕಾಲದ ಜಾತೀಯ ಏಣಿ ಶ್ರೇಣಿಗಳ, ಅದರ ನಿರ್ಬಂಧಿತ ಕಟ್ಟಳೆಗಳ ಧಾರ್ಮಿಕ ಆಚರಣೆಗಳು ಹೇಳುವಂತೆ ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ವೇದವನೋದಿ ಹಾರವನಾದ ಅನ್ನುವ ಹಾಗೆ ಅವರವರ ವೃತ್ತಿಯನ್ನು ಆಧರಿಸಿ ಬದುಕು ರೂಪಿಸಿಕೊಂಡರು. ಹಾಗೆ ಲೌಕಿಕವಾದ ವ್ಯವಹಾರಗಳಲ್ಲಿ, ಅಲೌಕಿಕವಾದ ಭವ ಲೋಕದ ಬದುಕನ್ನು ನೋಡುವವರು ಆಗಿರುತ್ತಿದ್ದರು. ಈ ಹಿನ್ನಲೆಯಲ್ಲಿ ವಚನಕಾರರು ವಿಶಿಷ್ಟವಾದ ನಿಲುವಿನಲ್ಲಿ ಕಂಡುಬರುತ್ತಾರೆ. ಅವರು ನೀಡಿರುವ ವಿಚಾರಗಳು ಸಾಹಿತ್ಯದ ಓದಿಗೆ ಅಡಿಗಲ್ಲಾಗಿದೆ.

ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಬಹು ದೊಡ್ಡ ಕ್ರಾಂತಿಯನ್ನು ಬಸವಯುಗವು ಮಾಡಿತು. ಈ ಸಂದರ್ಭದಲ್ಲಿ ಬಸವಣ್ಣ, ಅಲ್ಲಮ ಪ್ರಭು, ಅಕ್ಕಮಹಾದೇವಿ, ಅಕ್ಕನಾಗಮ್ಮ, ಸಿದ್ದರಾಮ ಹೀಗೆ ಒಂಬೈನೂರಕ್ಕೂ ಹೆಚ್ಚು ಶರಣರು ತಮ್ಮ ಅನುಭವಗಳನ್ನು ಹಂಚಿಕೊಂಡರು. ಒಬ್ಬರೆ ಚಿಂತಿಸದೆ, ಮುಖಾ ಮುಖಿಯಾಗಿ ನೆಲೆಯಲ್ಲಿ ಬಹು ಮುಖಿಯಾಗಲು ಅನುಭವ ಮಂಟಪಕ್ಕೆ ಅಲ್ಲಮಪ್ರಭುರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಈ ಚರ್ಚೆಯಲ್ಲಿ ಕೆಳವರ್ಗದ ವಚನಕಾರರು, ವಚನಗಾರ್ತಿಯರು ಸೇರಿದಂತೆ ಶರಣ ಸಮುದಾಯಗಳು ಗಳಿಸಿದ್ದ ಜ್ಞಾನ, ಪಡೆದ ಅನುಭವ ಮತ್ತು ಸಮಾಜದಲ್ಲಿ ಆಗಲೇಬೇಕಾದ ಬದಲಾವಣೆಗಳು ಹಾಗು ಶಾಸ್ತ್ರಬದ್ಧ ವಿಚಾರಗಳು ಭಕ್ತಿಯ ಒಳಗಾಗುವಿಕೆಯ ಹಿನ್ನಲೆಯಲ್ಲಿ ವಿಭಿನ್ನ ಚಿಂತನೆಗಳನ್ನು ಮಾಡುತ್ತಿದ್ದರು. ಇದೊಂದು ಸಮೂಹದಲ್ಲಿ ಕೂಡಿ, ಇಡೀ ಸಮಾಜವನ್ನು ತಿದ್ದುವಲ್ಲಿನ ಅವಿರತ ಪ್ರಯತ್ನದಂತೆ ತೋರುತ್ತಿತ್ತು. ಇದೊಂದು ಚಾರಿತ್ರಿಕವಾದ ವೈಚಾರಿಕ ದಾಖಲೆಯಾಗಿದೆ. ಅನುಭವ ಮಂಟಪವು ಧಾರ್ಮಿಕ ಮತ್ತು ಸಾಮಾಜಿಕ ಸಮನ್ವಯಗಳಿಗೆ ವೇದಿಕೆಯಾಗಿದೆ.